ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ. ಎಂ. ಎಫ್. ಸಿ.ರವರ ನ್ಯಾಯಾಲಯ, ಮಡಿಕೇರಿ.

**ಸಿ.ಸಿ.ನಂಃ 2139/24**

ಪಿಡಬ್ಲ್ಯುಃ – 1

ಸಿಡಬ್ಲ್ಯುಃ – **1**

ದಿನಾಂಕಃ 15.12.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು | – ಭಾಸ್ಕರ |
| ತಂದೆಯ ಹೆಸರು | – ಮರಿಯಪ್ಪ |
| ವಯಸ್ಸು | – 72 ವರ್ಷ |
| ವೃತ್ತಿ | – ಮನೆ ಕೆಲಸ |
| ವಾಸಸ್ಥಳ | – ಪೆರಾಜೆ |

ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ಯವರಿಂದಃ-

ಚಾಸಾ–2 ನನ್ನ ಮಗಳು. ಚಾಸಾ–3 ನನ್ನ ಹೆಂಡತಿ. ಚಾಸಾ–4 ನನ್ನ ಮಗ. ಚಾಸಾ–5 ಮತ್ತು 6 ನನಗೆ ಗೊತ್ತು. 1 ಮತ್ತು 2ನೇ ಆರೋಪಿಗಳು ನನಗೆ ಗೊತ್ತು.

ದಿಃ 10.02.2024 ರಂದು ನಾನು ಮಡಿಕೇರಿಯ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ 1ನೇ ಆರೋಪಿಯ ವಿರುದ್ಧ ದೂರು ನೀಡಿದ್ದೇನೆ. ಚಾಸಾ–2 ಎಂ ವಿ ಶೆಟ್ಟಿ ಕಾಲೇಜು, ಮಂಗಳೂರಿನಲ್ಲಿ ಬಿ ಎಡ್ ಓದುತ್ತಿದ್ದಳು, ಅಲ್ಲಿಗೆ 1ನೇ ಆರೋಪಿ ಹೋಗಿ ನಾನು ಚಾಸಾ–2 ರವರನ್ನು ಪ್ರೀತಿಸುತ್ತಿದ್ದೇನೆ ಎಂದು ಹೇಳಿ ಕಿರುಕುಳ ನೀಡುತ್ತಿದ್ದನು, ಈ ವಿಚಾರವನ್ನು ಚಾಸಾ–2 ನನಗೆ ಹೇಳಿದ್ದಳು. ನಾನು 1ನೇ ಆರೋಪಿಯ ವಿರುದ್ಧ ಮಹಿಳಾ ಪೊಲೀಸ್ ಠಾಣೆ, ಪುತ್ತೂರಿನಲ್ಲಿ ದಿಃ 07.02.2024 ರಂದು ದೂರು ದಾಖಲಿಸಿದ್ದೆ. ದಿಃ 08.02.2024 ರಂದು ಪೊಲೀಸರು ನಮ್ಮನ್ನು ಹಾಗೂ 1ನೇ ಆರೋಪಿಯನ್ನು ಕರೆಸಿ ವಿಚಾರಣೆ ಮಾಡಿದರು. ಆಗ ಚಾಸಾ–2 ರವರು 1ನೇ ಆರೋಪಿ ತನಗೆ ತುಂಬಾ ಕಿರುಕುಳ ನೀಡುತ್ತಿದ್ದಾರೆ ಎಂದು ಹೇಳಿ ತಾನು 1ನೇ ಆರೋಪಿಯ ಜೊತೆ ಹೋಗುವುದಿಲ್ಲ, ನನ್ನ ತಂದೆಯ ಮನೆಗೆ ಹೋಗುತ್ತೇನೆ ಎಂದು ಹೇಳಿದ್ದರು. 1ನೇ ಆರೋಪಿ ಪೊಲೀಸರ ಮುಂದೆ

ಹೇಳಿಕೆ ನೀಡಿರುತ್ತಾನೆ. ನಂತರ ಚಾಸಾ-2 ನನ್ನ ಮನೆಗೆ ಬಂದಳು. ದಿಃ 09.02.2024 ರಂದು, ನಾನು, ಚಾಸಾ-2 ರಿಂದ 4 ನಮ್ಮ ಮನೆಯ ಅಂಗಳದಲ್ಲಿ ಮಾತನಾಡಿಕೊಂಡಿದ್ದಾಗ ಏಕಾಏಕಿ 1 ನೇ ಆರೋಪಿಯು ಜೆನ್ ಕಾರಿನಲ್ಲಿ ಮತ್ತೊಬ್ಬ ವ್ಯಕ್ತಿಯೊಂದಿಗೆ ಬಂದು, ಏಕಾಏಕಿ ನಮ್ಮ ಮನೆಯ ಒಳಗೆ ಅತಿಕ್ರಮ ಪ್ರವೇಶ ಮಾಡಿ ಚಾಸಾ-2ರವರನ್ನು ಮನೆಯಿಂದ ಎಳೆದುಕೊಂಡು ಬಂದನು. ಆಗ ನಾನು, ಚಾಸಾ-3 ಮತ್ತು 4 ರವರುಗಳು ಏಕೆ ಚಾಸಾ-2 ರವರನ್ನು ಎಳೆದುಕೊಂಡು ಹೋಗುತ್ತಿದ್ದೀಯಾ ಎಂದು 1ನೇ ಆರೋಪಿಯನ್ನು ಕೇಳಿದಾಗ 1ನೇ ಆರೋಪಿಯು ತನ್ನ ಕೈಯಿಂದ ನನ್ನ ಮೂಗಿಗೆ ಹೊಡೆದು, ನನ್ನನ್ನು ದೂಡಿದನು, 1ನೇ ಆರೋಪಿಯು ಚಾಸಾ-3 ರವರ ತಲೆ ಜುಟ್ಟನ್ನು ಹಿಡಿದು ಎಳೆದು, ಚಾಸಾ-3 ರವರನ್ನು ನೆಲಕ್ಕೆ ನೂಕಿದನು. 2ನೇ ಆರೋಪಿ ಅವನ ಜೊತೆಯಲ್ಲಿ 6 ಎಂ ಎಂ ಕಬ್ಬಿಣದ ರಾಡು ಮತ್ತು ಸಣ್ಣ ಮಚ್ಚನ್ನು ತಂದಿದ್ದ, ಚಾಸಾ-4 ರವರು ಏಕೆ ಚಾಸಾ-2 ರವರನ್ನು ಎಳೆದುಕೊಂಡ ಹೋಗುತ್ತಿದ್ದೀಯಾ ಎಂದು ಕೇಳಿದಾಗ 2ನೇ ಆರೋಪಿ ಚಾಸಾ-4 ರವರ ತಲೆಗೆ ರಾಡಿನಿಂದ ಹೊಡೆದನು ಹಾಗೂ ಮಚ್ಚನ್ನು ಚಾಸಾ-4 ರವರ ಕುತ್ತಿಗೆಯ ಬಳಿ ತಂದು ನಿನ್ನನ್ನು ಕೊಲ್ಲುತ್ತೇನೆ ಎಂದು ಜೀವ ಬೆದರಿಕೆ ಹಾಕಿಸಿದರು. ನಂತರ 1ನೇ ಆರೋಪಿ ಚಾಸಾ-2 ರವರನ್ನು ಎಳೆದುಕೊಂಡು ತಾನು ತಂದಿದ್ದ ಕಾರು ಸಂಖ್ಯೆ ಕೆಎ-09 ಎನ್- 4748 ರಲ್ಲಿ ಕೂರಿಸಿಕೊಂಡು ಕರೆದುಕೊಂಡು ಹೋದನು. ದಿಃ 10.02.2024 ರಂದು ನಾನು ಮಡಿಕೇರಿಯ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಆರೋಪಿತರ ವಿರುದ್ಧ ದೂರು ನೀಡಿರುತ್ತೇನೆ.

ಸಾಕ್ಷಿ ಸದರಿ ದೂರನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-1 ಎಂದು ಗುರುತಿಸಲಾಯಿತು. ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ನಾನು, ಚಾಸಾ-3 ಮತ್ತು 4 ರವರು ಸುಳ್ಯದ ಸರ್ಕಾರಿ ಆಸ್ಪತ್ರೆಯಲ್ಲಿ ನಮಗಾದ ನೋವು ಹಾಗೂ ಗಾಯಗಳಿಗೆ ಚಿಕಿತ್ಸೆ ಪಡೆದುಕೊಂಡಿರುತ್ತೇವೆ.

ಸಾಕ್ಷಿಗೆ ಮತ್ತೊಂದು ದಾಖಲೆಯನ್ನು ತೋರಿಸಲಾಗಿದ್ದು, ಅದು ಸ್ಥಳ ಮಹಜರಾಗಿದ್ದು, ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದಾರೆ. ಅದನ್ನು ನಿಪಿ-2 ಎಂದು ಗುರುತಿಸಲಾಯಿತು. ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ದಿಃ 11.02.2024 ರಂದು ಪೊಲೀಸರು ಪೆರಾಜೆ ಗ್ರಾಮದ ನನ್ನ ಮನೆಯಲ್ಲಿ ನಾನು ಘಟನಾ ಸ್ಥಳ ತೋರಿದ ಮೇರೆಗೆ ನನ್ನ ಹಾಗೂ ಚಾಸಾ-6

ರವರ ಸಮಕ್ಷಮ ಸ್ಥಳ ಮಹಜರು ಮಾಡಿರುತ್ತಾರೆ. ಆಗ ನಾನು ನಿಪಿ-2 ಕ್ಕೆ ಸಹಿ ಮಾಡಿರುತ್ತೇನೆ. ಚಾಸಾ-5 ಮತ್ತು 6 ಕೂಡ ನಿಪಿ-2 ಕ್ಕೆ ಸಹಿ ಮಾಡಿದ್ದಾರೆ. ಮನೆಯ ಕಚ್ಚಾ ನಕಾಶೆಯನ್ನು ಕೂಡ ಮಹಜರು ಕಾಲಕ್ಕೆ ಪೊಲೀಸರು ಬರೆದಿರುತ್ತಾರೆ. ಸದರಿ ನಕಾಶೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಪಿ-3 ಎಂದು ಗುರುತಿಸಲಾಯಿತು. ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ಪೊಲೀಸರು ಮಹಜರು ಮಾಡುವಾಗ ಘಟನಾ ಸ್ಥಳದ ಫೊಟೋಗಳನ್ನು ತೆಗೆದಿರುತ್ತಾರೆ. ಅವುಗಳನ್ನು ಸಾಕ್ಷಿ ನೋಡಿದರೆ ಗುರುತಿಸುತ್ತೇನೆ ಎಂದು ಸಾಕ್ಷಿನೋಡಿ ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ-4 ಮತ್ತು 5 ಎಂದು ಗುರುತಿಸಲಾಯಿತು. ಆರೋಪಿಗಳು ಆ ದಿನ ತಂದಿದ್ದ ಕಾರನ್ನು ನೋಡಿದರೆ ಗುರುತಿಸುತ್ತೇನೆ ಎಂದು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ-6 ಮತ್ತು ನಿಪಿ-7 ಎಂದು ಗುರುತಿಸಲಾಯಿತು. 1ನೇ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ, 1ನೇ ಆರೋಪಿ ಗೈರು. 1ನೇ ಆರೋಪಿ ಪರ ವಕೀಲರು ಇ ಪಿ ಅರ್ಜಿಯನ್ನು ಹಾಕಿದ್ದು, 1ನೇ ಆರೋಪಿಯನ್ನು ಗುರುತಿಸಲು ತಕರಾರು ಇಲ್ಲ ಎಂದು ನುಡಿದಿರುತ್ತಾರೆ. ಈ ಪ್ರಕರಣದ 2 ನೇ ಆರೋಪಿ ಮೃತ ಪಟ್ಟಿರುತ್ತಾರೆ. 1ನೇ ಆರೋಪಿಯು ಬಲವಂತವಾಗಿ ಚಾಸಾ-2 ರವರನ್ನು ಎಳೆದುಕೊಂಡು ಹೋಗಿರುತ್ತಾರೆ. ಚಾಸಾ-2 ರವರನ್ನು ಪ್ರೀತಿ ಮಾಡುತ್ತೇನೆ ಎಂದು ಹೇಳಿ 1ನೇ ಆರೋಪಿಯು ಚಾಸಾ-2 ರವರಿಗೆ ಹಿಂಸೆ ನೀಡಿರುತ್ತಾರೆ.

ಪಾಟೀ ಸವಾಲುಃ -1ನೇ ಆರೋಪಿ ಪರ ವಕೀಲರು ಪಾಟಿ ಸವಾಲಿಗೆ ಸಮಯಾವಕಾಶ ಕೋರಿದ್ದು, ಖರ್ಚು ವಿಧಿಸಿ ಪಾಟಿ ಸವಾಲಿಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ. ಎಂ. ಎಫ್. ಸಿ, ಮಡಿಕೇರಿ.